ಶ್ರೀ ಕೆ.ಹೆಚ್. ರಂಗನಾಥ್ (ಕಾಮಗಾರಿ ಸಚಿವರು):- ಮಾನ್ಯ ಅಧ್ಯಕ್ಷರೇ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯಲ್ಲಿ ಮದ್ದೂರಿನ ಹತ್ತಿರ ಕಿ.ಮೀ. 78ರಲ್ಲಿ ಶಿಂಷಾನದಿಗೆ ಅಡ್ಡಲಾಗಿ ಇರುವ ಹಳೆಯ ಸೇತುವೆಯ ಪಕ್ಕದಲ್ಲಿ ಒಂದು ಹೊಸ ಸೇತುವೆಯ ನಿರ್ಮಾಣವನ್ನು ಕೇಂದ್ರ ರಸ್ತೆ ನಿಧಿಯಡಿಯಲ್ಲಿ ತೆಗೆದುಕೊಳ್ಳಲು ರೂ.80 ಲಕ್ಷಗಳ ಅಂದಾಜಿಗೆ ಡಿಸೆಂಬರ್ 1991ರಲ್ಲಿ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿರುತ್ತದೆ. ಸದರಿ ಪ್ರಸ್ತಾವನೆಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರಿ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 1 ಸಿಆರ್ಎಫ್ 92, ದಿನಾಂಕ: 13-2-1992 ರಲ್ಲಿ ನೀಡಲಾಗಿದೆ. ಸದರಿ ಸೇತುವೆಯ ನಿರ್ಮಾಣಕ್ಕೆ ಗುತ್ತಿಗೆಗಳು ಸ್ವೀಕೃತವಾಗಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಗುತ್ತಿಗೆಗೆ ಅನುಮೋದನೆ ದೊರೆತ ಕೂಡಲೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

(4) ವಿಟ್ಲ ಮತ್ತು ಸುತ್ತಮುತ್ತಲಿನ ರೈತರಿಗೆ ವಿದ್ಯುತ್ ಲೋ ಓಲ್ಟೇಜಿನಿಂದ ತೊಂದರೆ

ಶ್ರೀ ಎ. ರುಕ್ಮಯ್ಯ ಪೂಜಾರಿ:- ಮಾನ್ಯ ಉಪಾಧ್ಯಕ್ಷಿಣಿಯವರೆ, ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಆದರ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ವಿದ್ಯುತ್ ಬಳಕೆದಾರರು ವಿದ್ಯುತ್ ಲೋ ಓಲ್ಟೇಜ್‌ನಿಂದ ಕಳೆದ ಒಂದು ವಾರದಿಂದ ಅಸಹನೀಯ ತೊಂದರೆಗೊಳಗಾಗಿದ್ದಾರೆ. ಪುತ್ತೂರು ಕೆ.ಇ.ಬಿ. ಉಪವಿಭಾಗದಲ್ಲಿ ವಿಟ್ಲ ಫೀಡರಿನ ಟ್ರಾನ್ಸ್‌ಫಾರ್ಮರ್ ಕೆಟ್ಟು ಹೋಗಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ನೀರಾವರಿ ಪಂಪುಗಳು ಚಾಲೂ ಆಗುವುದಿಲ್ಲ. ವಿದ್ಯುತ್ ದೀಪಗಳು ಕೂಡ ಸರಿಯಾಗಿ ಉರಿಯುವುದಿಲ್ಲ. ಹಾಗೆಯೇ ವಿದ್ಯುತ್ ಟ್ರಾನ್ಸ್‌ಫಾರ್ಮರ್ ತನ್ನ ಸಾಮರ್ಥ್ಯಕ್ಕಿಂತ ಎರಡು ಪಟ್ಟು ವಿದ್ಯುತ್ ಲೋಡನ್ನು ಸಹಿಸದೆ ಸುಟ್ಟು ಹೋಗುತ್ತಿರುವುದು ಸಾಮಾನ್ಯವಾಗಿದೆ. ರೈತರಿಗೆ ನೀರಿದ್ದೂ ಕೃಷಿಗೆ ನೀರು ಒದಗಿಸದ ಪರಿಸ್ಥಿತಿ ಉಂಟಾಗುತ್ತದೆ. ಈಗ ಕೃಷಿಗೆ ನೀರಿನ ಅವಶ್ಯಕತೆ ಅತೀ ಅಗತ್ಯವಿರುವುದರಿಂದ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಸರಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡು ರೈತರ ಜನರ ಗೊಂದಲವನ್ನು ನಿವಾರಿಸುವ ಬಗ್ಗೆ ಸರಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ- ಕಾರ್ಮಿಕ ಮಂತ್ರಿಗಳು, (ಮುಖ್ಯಮಂತ್ರಿಗಳ ಪರವಾಗಿ):- ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಆದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಳೆದ ಒಂದು ವಾರದಿಂದ ಉಂಟಾಗಿರುವ ವಿದ್ಯುತ್ ಕಡಿಮೆ ವೋಲ್ಟೇಜ್ ಪರಿಸ್ಥಿತಿಯು ಮಂಡಳಿಯ ಗಮನಕ್ಕೆ ಬಂದಿದೆ. ಹಾಲಿ, ವಿಟ್ಲ ಮತ್ತು ಆದರ ಸುತ್ತಮುತ್ತಲಿನ ಪ್ರದೇಶಗಳು, ಪುತ್ತೂರಿನಲ್ಲಿರುವ 110 ಕೆ.ವಿ. ಉಪವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜನ್ನು ಪಡೆಯುತ್ತಿವೆ. ದಿನಾಂಕ 31-12-1992ರಂದು ಸದರಿ ಉಪ ವಿದ್ಯುತ್ ಕೇಂದ್ರದಲ್ಲಿ 5 ಎಂ.ಡಿ.ಎ. ಸಾಮರ್ಥ್ಯದ 33:11 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರ್ ವಿಫಲಗೊಂಡಿತ್ತು. ಹೀಗಾಗಿ, ಈ ಉಪವಿದ್ಯುತ್ ಕೇಂದ್ರದಲ್ಲಿ ಓವರ್ ಲೋಡ್‌ನ್ನು ತಪ್ಪಿಸಲು ವಿಟ್ಲ ಮತ್ತು ಆದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿದೆ. ವಿಫಲಗೊಂಡಿರುವ 5 ಎಂ.ಡಿ.ಎ. ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಒಳ್ಳೆಯ ಟ್ರಾನ್ಸ್‌ಫಾರ್ಮರ್‌ನಿಂದ ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಲಭ್ಯವಿರುವ 5 ಎಂ.ವಿ.ಎ. 33:11 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಪುತ್ತೂರಿಗೆ ಸಾಗಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಆದಷ್ಟು ಜಾಗ್ರತೆ ಈ ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಪುತ್ತೂರಿಗೆ ಸಾಗಿಸಿ ಅಲ್ಲಿ ಸ್ಥಾಪಿಸಲಾಗುವುದು.

ವಿಟ್ಲ ಮಂಡಳಿಯು ಒಂದು 110 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಸುಮಾರು 72.62 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರಕ್ಕೆ ಅಗತ್ಯವಿರುವ 10 ಎಂ.ವಿ.ಎ. ಸಾಮರ್ಥ್ಯದ 110:11 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರ್, ಸ್ವಿಚ್‌ಗೇರ್,

ಇತ್ಯಾದಿಗಳು ಲಭ್ಯವಿದ್ದು, ಮಾರ್ಚ್ 93ರ ಅಂತ್ಯದ ವೇಳೆಗೆ ಸದರಿ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ವಿಟ್ಲ ಮತ್ತು ಅದರ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯು ಸಾಕಷ್ಟು ಪ್ರಮಾಣದಲ್ಲಿ ಸುಧಾರಣೆಗೊಳ್ಳುವುದು.

Sanction of Industrial Estate at Nipani

SRI SUBASH JOSHI:- Nipani is a border and an industrial town, but since the Government was not enstablished any industrial estate in Nipani town, people are facing difficulties. I request the Industries Minister to sanction industrial estate for Nipani town.

SRI BLASIUS M. DISOUZA (MINISTER FOR LABOUR) (On behalf of the Chief Minister):- I would like to make the following statement:

> "The Karnataka State Small Industries Development Corporation has acquired 3.2 acres of land at Nipani for establishing industrial estate. Recently a government notification has been issued inviting applications for the same. Considering the response to this notification, a programme for establishment of sheds and set up the industrial estate will be taken up."

ಗುಲ್ಬರ್ಗ ಜಿಲ್ಲೆಯಲ್ಲಿ ಅಬಕಾರಿ ಗಾರ್ಡ್‌ಗಳ ನೇಮಕಾತಿಯಲ್ಲಿ ಅವ್ಯವಹಾರ.

ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):- ಮಾನ್ಯ ಉಪಾಧ್ಯಕ್ಷರೇ, ಗುಲಬರ್ಗಾ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಲ್ಲಿ ಅಬಕಾರಿ ಗಾರ್ಡ್ ನೇಮಕಾತಿಯಲ್ಲಿ ಅವ್ಯವಹಾರ ಹಾಗೂ ಸುಳ್ಳುಜಾತಿ ಪ್ರಮಾಣ ಪತ್ರವನ್ನು ಅಧಿಕಾರಿಗಳೇ ಸೃಷ್ಟಿಸಿ ಅವರವರ ಅಭ್ಯರ್ಥಿಗಳನ್ನು ನೇಮಿಸಿಕೊಂಡಿದ್ದು ಹಾಗೂ ಅಭ್ಯರ್ಥಿಗಳಿಂದ ದುಡ್ಡು ಪಡೆದಿದ್ದು ಸಾರ್ವಜನಿಕರಿಂದ ತಿಳಿದುಬಂದಿದೆ. ಹಾಗೂ ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿದ್ದಾರೆ. ಆಯ್ಕೆಯ ಪಟ್ಟಿಯನ್ನು ದಿನಾಂಕ 8.1.1993ರಂದು ಪ್ರಕಟಿಸಲಾಗಿದೆಯೆಂದು ತಿಳಿದುಬಂದಿದೆ. ಆದ್ದರಿಂದ ಈ ಪಟ್ಟಿಯನ್ನು ರದ್ದುಪಡಿಸಿ, ಅಧಿಕಾರಿಗಳ ಮೇಲೆ ವಿಚಾರಣೆ ಮಾಡಿ, ಪುನಃ ಹೊಸದಾಗಿ ಆಯ್ಕೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಓದುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಅಬಕಾರಿ ರಕ್ಷಕರ ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಜಿಲ್ಲೆಯ ಅಬಕಾರಿ ರಕ್ಷಕರ ಹುದ್ದೆಗಳಿಗೆ ತಮ್ಮ ಆದೇಶ ಸಂಖ್ಯೆ:ಎಡಿಎಂ.ಇಎಸ್‌ಟಿ:130:90-91 ದಿನಾಂಕ 8-1-93ರ ಮೂಲಕ 50 ಜನ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಪಡಿಸಿರುತ್ತಾರೆ. ಈ ಪಟ್ಟಿಯೊಡನೆ 5 ಜನ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಹ ಪ್ರಕಟಿಸಿರುತ್ತಾರೆ. ಈ ರೀತಿಯ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಮೊದಲು, ನೇಮಕಾತಿ ಸಮಿತಿಯ ಅಧ್ಯಕ್ಷರು ಮತ್ತು ಅಬಕಾರಿ ಜಿಲ್ಲಾಧಿಕಾರಿಗಳು ಗುಲ್ಬರ್ಗಾ ಇವರು ಈ ಕೆಳಕಾಣಿಸಿದ ಸಮಿತಿಯ ಸದಸ್ಯರ ನೆರವಿನೊಂದಿಗೆ ಇದೇ ತಿಂಗಳ ಅಂದರೆ ಜನವರಿ 1993ರ 4, 5 ಮತ್ತು 6ನೇ ದಿನಾಂಕಗಳಂದು ಅಭ್ಯರ್ಥಿಗಳ ಸಂದರ್ಶನ ನಡೆಸಿರುತ್ತಾರೆ.